ಕ್ರ. ಸಂ.	ರಸ್ತೆಯ ಹೆಸರು	ಯೋಜನೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ರಸ್ತೆ ಅಭಿವೃದ್ಧಿಪಡಿಸುವ ಉದ್ದ (ಕಿಮೀ)
	ಔರಾದ ತಾಲ್ಲೂಕು			
1.	ಔರಾದ್ ತಾಲ್ಲೂಕಿನ ಕೌಟಾ ಔರಾದ್ ರಸ್ತೆ ಸುಧಾರಣೆ	ನಬಾರ್ಡ್	70.00	8.80
	ಬಸವಕಲ್ಯಾಣ ತಾಲ್ಲೂಕು			
2.	ಸಸ್ತಾಪೂರ ಹತ್ಯಾಳ ರಸ್ತೆ ಸುಧಾರಣೆ	ನಬಾರ್ಡ್	170.00	15.00
3.	ರಾಜೇಶ್ವರ ಲಿಂಗದಳ್ಳಿ ರಸ್ತೆ ಸುಧಾರಣೆ	ನಬಾರ್ಡ್	58.00	6.50
4.	ಧನ್ನೂರು (ಕೆ.ಕ್ರಾಸ್‌ದಿಂದ ಘಾಟಿಬೋರಾಳ)	ನಬಾರ್ಡ್	95.00	10.00
5.	ಕನಗಾಂವ ದೇವಿ ತಾಂಡಾ ಕಲಖೋರ ರಸ್ತೆ	ನಬಾರ್ಡ್	40.00	6.00
	ಹುಮ್ನಾಬಾದ್ ತಾಲ್ಲೂಕು			
6.	ದುಖಿಲಗುಂಡಿ ಕಬೀರಾಬಾವಾಡಿ ರಸ್ತೆ ಸುಧಾರಣೆ	ನಬಾರ್ಡ್	20.00	4.00
7.	ಕುಮಾರ ಚಿಂಚೋಳಿ ಹಂದಿಕೇರಾ ರಸ್ತೆ	ನಬಾರ್ಡ್	33.50	3.00
8.	ಹುಮ್ನಾಬಾದ ಬೋರಂಪಳ್ಳಿ ರಸ್ತೆ	ನಬಾರ್ಡ್	60.00	9.00
	ಭಾಲ್ಕಿ ತಾಲ್ಲೂಕು			
9.	ಡಳಕಪೂರ ಹಳ್ಳಿಖೇಡ ರಸ್ತೆ	ನಬಾರ್ಡ್	20.00	3.00
10.	ಮುರಂಬಿ ಆರ್. ಗೌಡಗಾಂವ ರಸ್ತೆ	ನಬಾರ್ಡ್	17.00	2.00
			583.50	**67.30**

ಕ್ರಮ ಸಂಖ್ಯೆ 2ರಲ್ಲಿನ ಒಂದು ಕಾಮಗಾರಿಯು ಪ್ರಗತಿಯಲ್ಲಿದ್ದು ಉಳಿದೆಲ್ಲ 9 ಕೆಲಸಗಳಿಗೆ ಟೆಂಡರ್ ಪ್ರಕ್ರಿಯೆಯಲ್ಲಿದ್ದು ಗುತ್ತಿಗೆದಾರರನ್ನು ನೇಮಕ ಮಾಡಿ ಕೆಲಸವನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು.

545(736) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಯಾವ ಯಾವ ತಾಲ್ಲೂಕು ಕೇಂದ್ರ ಸ್ಥಾನದಿಂದ ಬೆಂಗಳೂರಿಗೆ ನೇರ ಬಸ್ಸಿನ ಸೌಲಭ್ಯವನ್ನು ಕಲ್ಪಿಸಲಾಗಿದೆ; ಹಾಗೂ ಇವು ಕೇಂದ್ರ ಸ್ಥಳದಿಂದ ಹೊರಡುವ ಹಾಗೂ ಬೆಂಗಳೂರನ್ನು ತಲುಪುವ ವಿವರಗಳನ್ನು ಒದಗಿಸುವುದು;

ಆ) ಔರಾದ್‌ನಿಂದ ಬೆಂಗಳೂರಿಗೆ ನೇರ ಬಸ್ಸಿನ ಸೌಲಭ್ಯವಿದೇಯೇ;

ಇ) ಇಲ್ಲದಿದ್ದಲ್ಲಿ, ಈ ಭಾಗದ ಜನರು ಬೆಂಗಳೂರಿಗೆ ಬರುವ ಸಂದರ್ಭದಲ್ಲಿ ಬೀದರ್‌ನ ಮಾರ್ಗವಾಗಿ ಬರುವುದರಿಂದ ಹಣ ಮತ್ತು ಸಮಯ ವ್ಯರ್ಥವಾಗುತ್ತಿರುವುದರಿಂದ ಜಿರಾದ್‌ನಿಂದಲೇ ನೇರವಾಗಿ ಬೆಂಗಳೂರು ನಗರಕ್ಕೆ ರಾಜಹಂಸ ಬಸ್ಸನ್ನು ಓಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ;

ಈ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬೀದರ್, ಭಾಲ್ಕಿ ಬಸವಕಲ್ಯಾಣ ಹಾಗೂ ಹುಮನಾಬಾದ್ ತಾಲ್ಲೂಕು ಕೇಂದ್ರಗಳಿಂದ ಬೆಂಗಳೂರಿಗೆ ನೇರವಾಗಿ ಸಾರಿಗೆ ಸೌಕರ್ಯವಿರುತ್ತದೆ, (ವಿವರವನ್ನು ಅನುಬಂಧದಲ್ಲಿ ನೀಡಿದೆ)

ಆ) ಇಲ್ಲ

ಇ) ಪ್ರಯಾಣಿಕರ ಒತ್ತಡ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಅನುಬಂಧ

ಘಟಕ	ಅನುಸೂಚಿ ಸಂಖ್ಯೆ	ಮಾರ್ಗ ಯಿಂದ–ವರೆಗೆ	ನಿರ್ಗಮನ	ಆಗಮನ	ವಯಾ
ಬೀದರ್	251	ಬೀದರ್–ಬೆಂಗಳೂರು (ರಾಜಹಂಸ)	18.00 ಬೀದರ್	09.45 ಬೆಂಗಳೂರು	ಹೈದ್ರಾಬಾದ್
ಬೀದರ್	252	ಬೆಂಗಳೂರು–ಬೀದರ್ (ರಾಜಹರಿಸ)	18.00 ಬೆಂಗಳೂರು	09.45 ಬೀದರ್	ಹೈದ್ರಾಬಾದ್
ಬೀದರ್	3	ಬೀದರ್–ಬೆಂಗಳೂರು (ವೇಗದೂತ)	14.45 ಬೀದರ್	08.30 ಬೆಂಗಳೂರು	ಗುಲ್ಬರ್ಗಾ
ಬೀದರ್	4	ಬೆಂಗಳೂರು–ಬೀದರ್ (ವೇಗದೂತ)	16.30 ಬೆಂಗಳೂರು	10.15 ಬೀದರ್	ಗುಲ್ಬರ್ಗಾ
ಹುಮನಾಬಾದ್	54	ಹುಮನಾಬಾದ್–ಬೆಂಗಳೂರು (ವೇಗದೂತ)	14.00 ಹುಮನಾಬಾದ್	07.00 ಬೆಂಗಳೂರು	ಗುಲ್ಬರ್ಗಾ
ಹುಮನಾಬಾದ್	55	ಬೆಂಗಳೂರು–ಹುಮನಾಬಾದ್ (ವೇಗದೂತ)	19.00 ಬೆಂಗಳೂರು	12.00 ಹುಮನಾಬಾದ್	ಗುಲ್ಬರ್ಗಾ
ಭಾಲ್ಕಿ	221	ಭಾಲ್ಕಿ–ಬೆಂಗಳೂರು (ರಾಜಹಂಸ)	15.00 ಭಾಲ್ಕಿ	08.15 ಬೆಂಗಳೂರು	ಹೈದ್ರಾಬಾದ್
ಭಾಲ್ಕಿ	221	ಭಾಲ್ಕಿ–ಬೆಂಗಳೂರು (ರಾಜಹಂಸ)	15.00	08.15	ಹೈದ್ರಾಬಾದ್

1	2	3	4	5	6
ಭಾಲ್ಕಿ	222	ಬೆಂಗಳೂರು–ಭಾಲ್ಕಿ (ರಾಜಹಂಸ)	18.45 ಬೆಂಗಳೂರು	11.15 ಭಾಲ್ಕಿ	ಹೈದ್ರಾಬಾದ್
ಬಸವಕಲ್ಯಾಣ	221	ಬಸವಕಲ್ಯಾಣ–ಬೆಂಗಳೂರು (ವೇಗದೂತ)	10.30 ಬಸವಕಲ್ಯಾಣ	04.15 ಬೆಂಗಳೂರು	ಗುಲ್ಬರ್ಗಾ ಹೊಸಪೇಟೆ
ಬಸವಕಲ್ಯಾಣ	222	ಬೆಂಗಳೂರು–ಬಸವಕಲ್ಯಾಣ (ವೇಗದೂತ)	13.30 ಬೆಂಗಳೂರು	07.00 ಬಸವಕಲ್ಯಾಣ	ಹೊಸಪೇಟೆ ಗುಲ್ಬರ್ಗಾ
ಬಸವಕಲ್ಯಾಣ	229	ಬಸವಕಲ್ಯಾಣ–ಬೆಂಗಳೂರು (ರಾಜಹಂಸ)	13.00 ಬಸವಕಲ್ಯಾಣ	06.15 ಬೆಂಗಳೂರು	ಹೈದ್ರಾಬಾದ್
ಬಸವಕಲ್ಯಾಣ	230	ಬೆಂಗಳೂರು–ಬಸವಕಲ್ಯಾಣ (ರಾಜಹಂಸ)	16.30 ಬೆಂಗಳೂರು	09.45 ಬಸವಕಲ್ಯಾಣ	ಹೈದ್ರಾಬಾದ್

546(739) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ಈಗ ಇರುವ ಕೆರೆಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಆ) ಈ ಕೆರೆಗಳ ಪೈಕಿ ಎಷ್ಟು ಕೆರೆಗಳಲ್ಲಿ ನೀರಿದ್ದು, ಜನರಿಗೆ ಉಪಯುಕ್ತವಾಗುತ್ತಿದೆ; ಹಾಗೂ ಎಷ್ಟು ಕೆರೆಗಳು ನೀರಿಲ್ಲದೆ ಬತ್ತಿ ಹೋಗಿ ನಿಷ್ಕ್ರಿಯವಾಗಿವೆ;

ಇ) ಈ ಕೆರೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ರೂಪಿಸಿದೆ;

ಈ) ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸಲು ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದೆ;

ಉ) ಸರ್ವೆ ಕಾರ್ಯವನ್ನು ಮುಗಿಸಿ ಹಲವಾರು ವರ್ಷಗಳಾಗಿದ್ದರೂ ಹೊಸ ಕೆರೆಗಳನ್ನು ನಿರ್ಮಿಸುವ ಕಾರ್ಯವನ್ನು ತೆಗೆದುಕೊಳ್ಳದಿರುವುದು ನಿಜವಲ್ಲವೇ: ಹಾಗೂ ಇದಕ್ಕೆ ಕಾರಣಗಳೇನು;

ಊ) ಔರಾದ್ ತಾಲ್ಲೂಕಿನಲ್ಲಿ ಜನ ಜಾನುವಾರುಗಳಿಗೆ ತೀವ್ರವಾದ ನೀರಿನ ಕೊರತೆ ಇರುವುದರಿಂದ ಈಗಾಗಲೇ ಸರ್ವೆ ಕಾರ್ಯ ಪೂರ್ಣಗೊಂಡಿರುವ ಸ್ಥಳಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ;